## ಭೂಕಂಪ

ಇತ್ತೀಚೆಗೆ ಗುಜರಾತಿನಲ್ಲಿ ಸಂಭವಿಸಿದ ಭೂಕಂಪ ಇಡೀ ಜಗತ್ತನ್ನೇ ಕಂಪಿಸಿತು. ಎಲ್ಲರ ಹೃದಯವನ್ನೂ ಕಂಪಿಸಿತು. ಲಕ್ಷಾಂತರ ಜನರನ್ನು ಅದು ಕಬಳಿಸಿತು, ಬಹುಶಃ ಕೋಟ್ಯಂತರ ಜನರು ಮನೆ ಮಠ ಕಳೆದುಕೊಂಡು ಕಷ್ಟಕ್ಕೀಡಾದರು. ಈ ಭೂಮಿಯ ಮೇಲಿನ ಜೀವನ ಎಷ್ಟು ಅಸ್ಥಿರ ಎಂಬುದನ್ನು ಎಲ್ಲರೂ ಭಾವಿಸುವಂತೆ ಮಾಡಿತು.

೩.೫ ಬಿಲಿಯನ್ ವರ್ಷಗಳ ಹಿಂದೆ ಭೂಮಿಯ ಮೇಲೆ ಜೀವಕಣಗಳು ಪ್ರಾರಂಭವಾದವು. ವಿಕಾಸವು ಮುಂದುವರಿದು ಕೇವಲ ಮೊನ್ನೆಯಷ್ಟೆ, ಅಂದರೆ ೩೫,೦೦೦ ವರ್ಷಗಳ ಹಿಂದೆ ಮಾನವನು ಅಸ್ತಿತ್ವಕ್ಕೆ ಬಂದನು. ಈ ಸುದೀರ್ಘ ವಿಕಾಸದ ಅವಧಿಯಲ್ಲಿ ಅನೇಕ ಅನಾಹುತಗಳಾಗಿವೆ. ಎಷ್ಟೋ ಸಸ್ಯವರ್ಗಗಳು, ಪ್ರಾಣಿವರ್ಗಗಳು ನಶಿಸಿಹೋಗಿವೆ. 'ಇತ್ತೀಚೆಗೆ, ೨೪೫ ಮಿಲಿಯನ್ ವರ್ಷಗಳ ಹಿಂದೆ ಅತ್ಯಂತ ಭೀಕರ ಜಗಪ್ರಲಯವೊಂದು ಸಂಭವಿಸಿ, ಅದರ ಪ್ರತಿಫಲವಾಗಿ ಸಸ್ತನಿ ಪ್ರಾಣಿಗಳ ವಿಕಾಸವಾಯಿತು. ೬೬ ಮಿಲಿಯನ್ ವರ್ಷಗಳ ಹಿಂದೆ ಇಂಥದೇ ಪ್ರಲಯದಲ್ಲಿ ಡೈನೊಸರ್ ಪ್ರಾಣಿಗಳು ನಿರ್ನಾಮವಾಗಿ ಉನ್ನತ ವರ್ಗದ ಸಸ್ತನಿಗಳು ಮತ್ತು ಕೊನೆಗೆ ಮಾನವನ ಆಗಮನಕ್ಕೆ ಎಡೆ ಮಾಡಿಕೊಟ್ಟಿತು' (Fritjof Capra, *The Web of Life*).

ಹೀಗೆ ಸೃಷ್ಟಿ ಮತ್ತು ವಿನಾಶ ಪರಸ್ಪರ ಪೂರಕಗಳೆಂದು ಕಂಡುಬರುತ್ತದೆ. ವಿನಾಶವು ವಿಕಾಸದ ಒಂದು ಅವಿಭಾಜ್ಯ ಅಂಗ. ಸ್ವಾಮಿ ವಿವೇಕಾನಂದರು ಕಾಳಿಯ ಪ್ರಲಯನರ್ತನವನ್ನು ಬಣ್ಣಿಸುತ್ತ (*Kali the Mother*) ಹೇಳುತ್ತಾರೆ: 'ನಿನ್ನ ಹೆಸರು ಕರಾಳಿ, ನಿನ್ನ ಉಚ್ಛ್ವಾಸ-ನಿಃಶ್ವಾಸಗಳಲ್ಲಿ ಮೃತ್ಯುವಿದೆ! ನಿನ್ನ ಭೀಮ ಚರಣಗಳ ಒಂದು ಅಡಿ ಒಂದು ಪ್ರಪಂಚವನ್ನೆ ನಾಶಮಾಡುತ್ತದೆ. ಕಾಳಿ! ಸರ್ವ ಭಕ್ಷಕಳು ನೀನು; ಬಾ ತಾಯಿ, ನನ್ನೆಡೆಗೆ ಬಾ!'

ನಾವೆಷ್ಟೇ ಮಾನವನು ಶ್ರೇಷ್ಠನೆಂದು ಹೇಳಿಕೊಂಡರೂ ಪ್ರಕೃತಿಯ ಮುಂದೆ ನಾವೆಲ್ಲ ಕ್ಷುದ್ರಜೀವಿಗಳು—ನಮ್ಮ ಪಾಲಿಗೆ ಇರುವೆ ಸೊಳ್ಳೆಗಳಿದ್ದಂತೆ. ನಮ್ಮ ಕಾರ್ಯಗಳ ನಡುವೆ ಇಂತಹ ಲಕ್ಷಾಂತರ ಜೀವಿಗಳನ್ನು ನಾಶಮಾಡುತ್ತೇವೆ. ಹಾಗೆಯೇ ಪ್ರಕೃತಿಯೂ ನಮ್ಮನ್ನು ನಾಶಮಾಡುತ್ತದೆ. ಆದರೆ ನಾಶಕ್ಕೆ ಒಳಗಾದಾಗ ಈ ರೀತಿ ಭಾವಿಸಿ ಸಮಾಧಾನ ತಂದುಕೊಳ್ಳುವುದು ಕಷ್ಟ. ದೂರದಿಂದ ಈ ರೀತಿ ವಿಚಾರ ಮಾಡುವುದು ಸುಲಭ. ☆

## ಪ್ರಹಸನ ಪ್ರಸಂಗ

ಸ್ವಾತಂತ್ರ್ಯ ಸ್ವಚ್ಛಂದ ವೃತ್ತಿಯಲ್ಲ. ನಾವು ಸ್ವತಂತ್ರರು ಎಂದು ಮನಬಂದಂತೆ ವರ್ತಿಸುವಂತಿಲ್ಲ. ನಮ್ಮ ಸುತ್ತಲಿರುವ ಇತರರೂ ನಮ್ಮಷ್ಟೇ ಸ್ವತಂತ್ರರು ಎಂಬುದನ್ನು ಮರೆಯಬಾರದು. ನಮ್ಮ ಸ್ವಾತಂತ್ರ್ಯ ಇತರರ ಸ್ವಾತಂತ್ರ್ಯಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು.

ಒಬ್ಬ ವ್ಯಕ್ತಿಯು ರಸ್ತೆಯಲ್ಲಿ ದೊಣ್ಣೆಯನ್ನು ಬೀಸುತ್ತ ಹೋಗುತ್ತಿದ್ದ. ಮುಂದಿನಿಂದ ಇನ್ನೋರ್ವ ವ್ಯಕ್ತಿ ಬಂದನು. ಮೊದಲನೆಯ ವ್ಯಕ್ತಿಯ ದೊಣ್ಣೆ ಅವನ ಮೂಗಿಗೆ ತಾಗಿತು.

ಎರಡನೆಯವನು (ಕೋಪದಿಂದ) : 'ಏಯ್, ನಿನಗೆ ಕಣ್ಣು ಕಾಣಿಸುವುದಿಲ್ಲವೇ? ಮೈಮೇಲೆ ಪ್ರಜ್ಞೆ ಇಲ್ಲವೆ? ನನ್ನ ಸುಂದರ ಮೂಗಿಗೆ ನಿನ್ನ ದೊಣ್ಣೆ ತಾಗಿಸಲು ನಿನಗೆಷ್ಟು ಧೈರ್ಯ! ಪೋಲಿಸರಿಗೆ ತಿಳಿಸುತ್ತೇನೆ.'

ಮೊದಲನೆಯವನು : 'ನಾನು ಸ್ವತಂತ್ರ ವ್ಯಕ್ತಿ. ನಾನು ಏನು ಬೇಕಾದರೂ ಮಾಡಬಲ್ಲೆ. ನೀನಾರೊ ಕೇಳುವುದಕ್ಕೆ?'

ಎರಡನೆಯವನು : 'ನೀನು ಸ್ವತಂತ್ರನಿರಬಹುದು. ಆದರೆ ನಿನ್ನ ಸ್ವಾತಂತ್ರ್ಯ ನನ್ನ ಮೂಗಿನವರೆಗೆ ಮಾತ್ರ. ನನ್ನ ಮೂಗು ಎಲ್ಲಿಂದ ಪ್ರಾರಂಭವಾಗುತ್ತದೊ ಅಲ್ಲಿಗೆ ನಿನ್ನ ಸ್ವಾತಂತ್ರ್ಯ ನಿಲ್ಲುತ್ತದೆ.'

ಸಾಮಾನ್ಯವಾಗಿ ಯೌವನದ ಉನ್ಮತ್ತತೆಯಲ್ಲಿರುವ ಯುವಕರು ತಾವೂ ಮುದುಕರಾಗುತ್ತೇವೆ, ಶಕ್ತಿ ಕುಂದುತ್ತದೆ, ದೇಹ ಸೊರಗುತ್ತದೆ ಎಂದು ಭಾವಿಸುವುದಿಲ್ಲ. ತಾವು ಯಾವಾಗಲೂ ಹಾಗೆಯೇ ಇರುವೆವು ಎಂಬ ರೀತಿಯಲ್ಲಿ ಅವರು ಜೀವನ ಸಾಗಿಸುತ್ತಾರೆ.

ಒಬ್ಬಳು ಚಿಕ್ಕ ಹುಡುಗಿ ಅಜ್ಜನ ತೊಡೆಯ ಮೇಲೆ ಕುಳಿತು ಆಟವಾಡುತ್ತಿದ್ದಳು. ಅವನ ತಲೆ, ಮುಖ ಮುಂತಾದವುಗಳನ್ನು ನೇವರಿಸತೊಡಗಿದಳು. ಅವನ ಬೋಳು ತಲೆ, ಸುಕ್ಕುಗಟ್ಟಿದ ಮುಖ ಮೊದಲಾದುವುಗಳನ್ನೆಲ್ಲ ಗಮನಿಸಿದಳು.

ಹುಡುಗಿ : ಅಜ್ಜ, ನಿನ್ನನ್ನು ಮಾಡಿರುವವನು ದೇವರೆ ಏನು?

ಅಜ್ಜ : ಹೌದು.

ಹುಡುಗಿ : ನನ್ನನ್ನೂ ದೇವರೇ ಮಾಡಿರುವುದೆ?

ಅಜ್ಜ : ಹೌದು.

ಹುಡುಗಿ :ದೇವರು ಈಗ ಮೊದಲಿಗಿಂತಲೂ ಚೆನ್ನಾಗಿ ಕೆಲಸ ಮಾಡುತ್ತಿರುವನು ಎಂದು ನಿನಗೆ ಅನಿಸುವುದಿಲ್ಲವೇ?

**"ಹಸನ್ಮುಖದ ಮೇಲಿನ ವಕ್ರಗೆರೆ ಅನೇಕ ವಕ್ರತೆಗಳನ್ನು ಹೋಗಲಾಡಿಸಬಲ್ಲದು."**